# ಪ್ರ.ಕ.ಸಂ ಅರ್ಪಿಸುವ ತಮ್ಮ ೮ನೇ ನಾಟಕ,
# ಕೆಂಗಲ್ ಹನುಮಂತಯ್ಯ ಕಲಾಸೌಧಕಕ್ಕೆ ನಿರ್ಮಿಸುತ್ತಿರುವ ೫ನೇ ನಾಟಕ

### #೧೩ ಮಾರ್ಗೋಸಾ ಮಹಲ್ – ಒಂದು ಫೈವ್ ಡಿ ಅನುಭವ

### ಆಡಿಶನ್ ದಿನಾಂಕ ಮತ್ತು ಸಮಯ – ೨೪ ಹಾಗು ೨೫ ಸೆಪ್ಟೆಂಬರ್ ಸಂಜೆ ೬ ರಿಂದ ೮.

ಕನ್ನಡ ಚಿತ್ರರಂಗದ ತಾರೆಯರನ್ನು ರಂಗದ ಮೇಲೆ ಹೊಸಬೆಳಕು ನಾಟಕದ ಮೂಲಕ ಪ್ರತಿಷ್ಠಾಪಿಸಿದ ನಂತರ ಪ್ರ.ಕ.ಸಂ ತನ್ನ ಮತ್ತೊಂದು ವಿಭಿನ್ನವಾದ ಪ್ರಯತ್ನದೊಂದಿಗೆ ಮರಳಿ ಬಂದಿದೆ. ಹಿಂದೆಂದೂ ಕೇಳದ, ನೋಡದ, ಮುಟ್ಟದ, ವಾಸನೆ ಸವಿಯದ, ರುಚಿ ನೋಡದ ನಾಟಕ " 13 ಮಾರ್ಗೋಸಾ ಮಹಲ್" ಇವರ ಹೊಸ ಪ್ರಯತ್ನ. ಹೌದು ನಾವು ಮೊದಲ ಬಾರಿಗೆ 5 ಇಂದ್ರೀಯಗಳನ್ನು ಪ್ರೇಕ್ಷಕರ ಅನುಬಹವಕ್ಕೆ ತರುವ ಯೋಜನೆ ಹೊಂದಿದ್ದೇವೆ.

ಬರುವ ಶನಿವಾರ ೨೪ ಸೆಪ್ಟೆಂಬರ್‌ರಂದು ಸಂಜೆ 4-8 ಘಂಟೆಯ ನಡುವೆ ನಾಟಕದ ಆಡಿಷನ್ಸ್, ಕಂಗಲ್ ಹನುಮಂತಯ್ಯ ಕಲಾಸೌಧ, ರಾಮಾಂಜನೇಯ ದೇವಸ್ಥಾನದ ಆವರಣ, ಹನುಮಂತನಗರ ಬೆಂಗಳೂರು ೫೬೦೦೧೯ ಇಲ್ಲಿ ನಡೆಯಲಿದೆ. ಆಸಕ್ತ ರಂಗಕರ್ಮಿಗಳು ಈ ನಾಟಕದಲ್ಲಿ ನಟಿಸಲು ಆಸಕ್ತಿ ಮೂಡಿದ ಕಾರಣ ಹಾಗು ತಮ್ಮ ಛಾಯಾಚಿತ್ರದೊಂದಿಗೆ ಮಿಂಚಂಚೆಯನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು. prakasamtrust@gmail.com ಹೆಚ್ಚಿನ ವಿವರಗಳಿಗಾಗಿ ಗೆ www.ivcorner.com/13 ಲಾಗಾನ್ ಮಾಡಿ ಅಥವಾ 9880388868 ಕರೆ ಮಾಡಿ

ಈ ನಾಟಕದ ಕಥೆ 3 ಐ.ಟಿ ಕಾರ್ಮಿಕರ ಸುತ್ತ ರಚಿಸಲಾಗಿದ್ದು ಅವರು ಒಂದು ಕಾಂಫರೆನ್ಸ್ಗೆಂದು ಹೋದಾಗ ನಡೆಯುವ ವಿಚಿತ್ರ ಹಾಗು ಹಾಸ್ಯ ಘಟನೆಗಳ ರಚನೆಯಾಗಿದೆ.

ಇದರ ಟ್ಯಾಗ್ ಲೈನ್ ಸೂಚಿಸುವಂತೆ ಇದು ಭಯ ಹಾಗು ಹಾಸ್ಯ ರಸಗಳ ಹದವಾದ ಮಿಶ್ರಣವನ್ನು ಹೊಂದಿರುವ ಕಥೆ. 3 ಸ್ನೇಹಿತರು ಕಲಸದ ಮೇಲೆ ಊರಿಗೆ ಬಂದು ಊರಾಚೆ ಇರುವ ತಂಗುದಾಣದಲ್ಲಿ ಅನಿರೀಕ್ಷಿತವಾಗಿ ಉಳಿಯುವ ಸಂದರ್ಭದಲ್ಲಿ ಉಂಟಾಗುವ ವಿಸ್ಮಯಕಾರಿ ಘಟನೆಗಳು ಹಾಗು ಸ್ನೇಹಿತರ ನಡುವಿನ ಹಾಸ್ಯ ಪ್ರಸಂಗಗಳು ನೋಡುಗರ ಮನಸೆಳೆಯುವಲ್ಲಿ ಯಶಸ್ವಿಯಾಗುವಲ್ಲಿ ಎರಡು ಮಾತಿಲ್ಲ.

ಈ ನಾಟಕದ ಸೂತ್ರಧಾರರಾದ ಪಿ.ಡಿ.ಸತೀಶ್ ಚಂದ್ರ " ಈ ನಾಟಕಕ್ಕೆ ಬರುವ ಪ್ರತಿಯೊಬ್ಬ ಪ್ರೇಕ್ಷಕನಿಗೂ ನೆನಪಿನಲ್ಲಿ ಉಳಿಯುವಂತಹ 5 ಡಿ ಅನುಭವ ನೀಡಲು ನನ್ನ ತಂಡ ಸರ್ವ ಸಿದ್ಧತೆಗಳನ್ನು ಮಾಡಿಕೊಂಡಿದೆ. ಈ ನಾಟಕದ ಸಂಗೀತದ ಸಾರಥ್ಯವನ್ನು ನಮ್ಮ ನಿಮ್ಮೆಲರ ಮೆಚ್ಚುಗೆಯ ಸಂಗೀತಗಾರ ರಘು ದೀಕ್ಷಿತ್ ರವರು ವಹಿಸಿಕೊಂಡಿರುವುದು ಮತ್ತೊಂದು ವಿಷೇಷ. ನನ್ನ ತಂಡದ ಅತ್ಯುತ್ತಮ ಬರಹಗಾರನಾದ ಚಂದನ್ ಶಂಕರ್ ನಾಟಕದ ಕನ್ನಡ ರಂಗರೂಪವನ್ನು ಬರೆದಿದ್ದಾರೆ. ಪ್ರ.ಕ.ಸಂ ನ ನನ್ನ ಎಲ್ಲ ಸಂಗಡಿಗರು ನಿಮ್ಮೆಲ್ಲರನ್ನು

ರಂಜಿಸುತ್ತ ಹೆದರಿಸಲು ಸಿದ್ಧರಾಗಿದ್ದಾರೆ. ನಾನು ಈ ಹಂದೆ ಜಿ.ವಿ. ಶಿವಾನಂದ್ ರಚಿತ "ಬೆಂಬಿಡದ ಭೂತ" ಎಂಬ ನಾಟಕದ ನಿರ್ದೇಶನ ಮಾಡುವ ಸಮಯದಲ್ಲಿ ಹುಟ್ಟಿದ ಕಥೆ #13. ಈ ನಾಟಕವು ನನಗೆ ವಯ್ಯಕ್ತಿಕವಾಗಿ ಅತಿ ಮೆಚ್ಚುಗೆಯ ಕಥೆಯಾಗಿದ್ದು ನವೆಂಬರ್ 13ಕ್ಕೆ ನಿಮ್ಮ ಮುಂದೆ ಪ್ರದರ್ಶನಗೊಳ್ಳಲಿದೆ.

ಪಿ.ಡಿ.ಸತೀಶ್ ಚಂದ್ರ

ಸತೀಶ್ ರವರು ಕನ್ನಡ ರಂಗಭೂಮಿಯ ಏಳಿಗೆಗಾಗಿ ಶ್ರಮಿಸುತ್ತಿರುವ ರಂಗಕರ್ಮಿ. ತಾವು ಪಟ್ಟ ಕಷ್ಟಗಳನ್ನು ಇಂದಿನ ಯುವಕ ಯುವತಿಯರು ಅನುಭವಿಸಬಾರದು, ಅವರ ಕ್ರಿಯಾಶೀಲತೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ದೊರಕಿಸಬೇಕಂಬ ಬಯಕೆಯಿಂದ ಪ್ರ.ಕ.ಸಂ ಎಂಬ ಸಂಸ್ಥೆಯ ಮೂಲಕ ದುಡಿಯುತ್ತಿದ್ದಾರೆ. ಕೆಂಗಲ್ ಹನುಮಂತಯ್ಯ ಕಲಾಸೌಧದ ನರ್ದೇಶಕರಾಗಿ ಯುವ ಹಾಗು ಉತ್ಸಾಹಿ ಕಲೆಗಾರರ ಉದ್ಧಾರಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ಇವರು ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಪಾಂಡುರಂಗ ವಿಠ್ಠಲ ಹಾಸ್ಯ ಧಾರಾವಾಹಿಯಲ್ಲಿ ನಟಿಸುತ್ತಿದ್ದು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರ.ಕ.ಸಂ

ಪ್ರದರ್ಶನ ಕಲಾ ಸಂಸ್ಥೆಯು ಪ್ರದರ್ಶನ ಕಲೆಗಳನ್ನು ನಿರ್ಮಿಸಿ, ನಿರೂಪಿಸಿ, ನಿರ್ವಹಿಸಲು ಪಣ ತೊಟ್ಟಿರುವ ಸಂಸ್ಥೆ. ಫ಼ೊರ್ಥ್ ಕಾರ್ನರ್ ಸಂಸ್ಥೆಯ ಸ್ವಯಂ ಸೇವಾ ಅಂಗವಾದ ಪ್ರ.ಕ.ಸಂ ಕೆ0ಗಲ್ ಹನುಮ0ತಯ್ಯ ಕಲಾಸೌಧದ ನಿರ್ವಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಗುತ್ತಿಗೆಗೆ ಪಡೆದುಕೊಂಡು ಪ್ರದರ್ಶನ ಕಲೆಗಳಾದ ನಾಟಕ, ನೃತ್ಯ, ಸಂಗೀತ ಮತ್ತು ಚಲನಚಿತ್ರಗಳ ಆಯಾಮಗಳ ಪರಿಚಯವನ್ನು ಹನುಮಂತನಗರ ಹಾಗು ಬಸವನಗುಡಿಯ ಸಹೃದಯಿ ನಾಗರೀಕರರಿಗೆ ಪ್ರಸ್ತುತ ಪಡಿಸುತ್ತಾ ಬಂದಿದೆ.

ಕೆಂಗಲ್ ಹನುಮಂತಯ್ಯ ಕಲಾಸೌಧ

ಕೆ ಎಚ್ ಕಲಾ ಸೌಧ ಎಂದೇ ಖ್ಯಾತಿಯನ್ನು ಹೊಂದಿರುವ ಕೆಂಗಲ್ ಹನುಮಂತಯ್ಯ ಕಲಾ ಸೌಧವು ಈಗ ಬೆಂಗಳೂರು ದಕ್ಷಿಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ನಮ್ಮ ಫೋರ್ತ್ ಕಾರ್ನರ್ ಕನ್ಸಲ್ಟೆಂಟ್ ಸಂಸ್ಥೆಯು ಬಿಬಿಎಂಪಿ ಯಿಂದ ಕಲಾಸೌಧವನ್ನು ಜನವರಿ 2010 ರಲ್ಲಿ ಗುತ್ತಿಗೆ ಪಡೆದಿದ್ದು, ಇದುವರೆಗೂ 190 ಕ್ಕೂ ಹೆಚ್ಚು ನಾಟಕ, ನೃತ್ಯ, ಸಂಗೀತ ಹಾಗು ಸಿನಿಮಾ ಕಾರ್ಯಕ್ರಮಗಳು ನಡೆದಿವೆ.